**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಎಂ.ಫಾರೂಕ್, ಕೆ.ಎ.ತಿಪ್ಪೇಸ್ವಾಮಿ ಮತ್ತು ಶ್ರೀ ಟಿ.ಎ.ಶರವಣ ರವರು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಹೇಳಿಕೆ**

ಸೂಚನೆ:-

ಅಮೇರಿಕದ ಸ್ಯಾನ್ ಫ್ರಾನ್ಸಿಸ್ಕೊ ನಗರ ಪ್ರಪಂಚದ 1ನೇ ಸಿಲಿಕಾನ್ ನಗರವೆಂದು ಕರೆಯಲ್ಪಟ್ಟರೆ, ಬೆಂಗಳೂರು ಪ್ರಪಂಚದ ಎರಡನೇ ಸಿಲಿಕಾನ್ ನಗರವೆಂದು ಕರೆಯಲ್ಪಡುತ್ತಿದೆ ಮತ್ತು ಅಂತರ ರಾಷ್ಟ್ರೀಯ ನಗರವೆಂದು ಪ್ರಸಿದ್ಧಿಯಾಗಿದೆ. ಮುಂದುವರೆದು, ನಗರದ ಪ್ರಸ್ತುತ ಜನಸಂಖ್ಯೆ 1.35 ಕೋಟಿಗಳಿಗೂ ಮೀರಿದೆ. ಅದರೆ, ನಗರದಲ್ಲಿ ದಿನೇದಿನೇ ವಾಹನಗಳ ಸಂಖ್ಯೆ ಹೆಚ್ಚಿ ನಗರದ ರಸ್ತೆಗಳಲ್ಲಿ ವಾಹನ ಸಂಚಾರ ಅವ್ಯವಸ್ಥೆಗೊಂಡಿದೆ. ಬೆಂಗಳೂರು ನಗರದ ಮಧ್ಯೆ ಬೆಂಗಳೂರು-ಮೈಸೂರು, ಬೆಂಗಳೂರು - ಚೆನ್ನೈ, ಬೆಂಗಳೂರು - ಪುಣೆ, ಬೆಂಗಳೂರು- ಹೈದರಬಾದ್ ಮುಂತಾದ ಎಕ್ಸಪ್ರೆಸ್ ಮಾರ್ಗ ಹಾದು ಹೋಗುತ್ತಿವೆ, ಅಲ್ಲದೆ ಘನ ತ್ಯಾಜ್ಯ ಹೊತ್ತು ಹೊಯ್ಯುವ ವಾಹನಗಳ ಮತ್ತು ಬಹುಚಕ್ರ ವಾಹನ ಸಂಚಾರದಿಂದ ವಾಹನ ಸಂಚಾರ ದಟ್ಟಣೆ ಹೆಚ್ಚಳದೊಂದಿಗೆ ಭೀಕರ ಅಪಘಾತಗಳು ಪ್ರತಿದಿನ ಸಂಭವಿಸುತ್ತಿವೆ. ಬೆಂಗಳೂರು ನಗರಕ್ಕೆ ದೇಶದ ವಿವಿಧೆಡೆಯಿಂದ ಬರುವ ಟ್ರಕ್‌ಗಳು ನಗರ ಪ್ರದೇಶವನ್ನು ಪ್ರವೇಶಿಸುವುದನ್ನು ತಪ್ಪಿಸಲು ರಾಜ್ಯ ಸರ್ಕಾರದ ಎರಡು ದಶಕಗಳ ಹಿಂದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ನಗರದ ಸುತ್ತಲೂ ಹೊರವರ್ತುಲ ರಸ್ತೆಯನ್ನು ನಿರ್ಮಿಸಲು (Peripheral Ring Road) ಯೋಜನೆಯನ್ನು ಮಂಜೂರು ಮಾಡಿದೆ. ಅದರೆ, ಈ ಯೋಜನೆಗೆ ಅಗತ್ಯವಿರುವ ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಿದ್ದು, ಭೂ ಮಾಲೀಕರಿಗೆ ಪರಿಹಾರ ಇದುವರೆಗೂ ನೀಡಿಲ್ಲ ಅಗತ್ಯವಿರುವ ರಸ್ತೆ ಕಾಮಗಾರಿ ಜೋಡಣೆಯನ್ನು ಇನ್ನೂ ಘನಕರಿಸಿಲ್ಲ. ಅಲ್ಲದೆ, ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು 2-3 ಬಾರಿ ಟೆಂಡರ್ ಆಹ್ವಾನಿಸಿದ್ದು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸದೆ ಹೊರವರ್ತುಲ ರಸ್ತೆ ಕಾಮಗಾರಿ ನೆನೆಗುದಿಗೆ ಬಿದ್ದಿದೆ. ಈ ಹೊರವರ್ತುಲ ರಸ್ತೆಯನ್ನು ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ ನಿರ್ಮಿಸಲು ಸಿದ್ದವಿದ್ದರೂ, ರಾಜ್ಯ ಸರ್ಕಾರ ಈ ಬಗ್ಗೆ ತೀರ್ಮಾನ ಕೈಗೆತ್ತಿಕೊಂಡಿಲ್ಲ. ಇಂತಹ ಸನ್ನಿವೇಶನದಲ್ಲಿ ಪ್ರಸ್ತುತ ಸರ್ಕಾರ ಎಚ್ಚೆತ್ತು ಈ ಮಹತ್ವದ ಹೊರವರ್ತುಲ ರಸ್ತೆ ಯೋಜನೆಯನ್ನು ತುರ್ತಾಗಿ ಅನುಷ್ಠಾನಗೊಳಿಸಲು ಮುಂದಾಗಬೇಕಾಗಿದೆ ಎಂಬ ಬಗ್ಗೆ.

ಉತ್ತರ:-

ಬೆಂಗಳೂರು ನಗರದಲ್ಲಿ ಕಳೆದ ಕೆಲವು ದಶಕಗಳಲ್ಲಿ ವಾಹನ ಬೆಳವಣಿಗೆಯ ಸಂಖ್ಯೆಯು ಜನಸಂಖ್ಯೆ ಬೆಳವಣಿಗೆಗಿಂತ ಗಣನೀಯವಾಗಿ ಹೆಚ್ಚಾಗಿರುತ್ತದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಕೊನೆಯ ಹಂತದ ಮಾರ್ಗವು (Last mile connectivity) ಸಮರ್ಪಕವಾಗಿ ಇರದ ಕಾರಣ ನಗರದೊಳಗೆ ಪ್ರಯಾಣಕ್ಕಾಗಿ ವೈಯಕ್ತಿಕ ಮೋಟಾರು ವಾಹನಗಳ ಬಳಕೆ ಹೆಚ್ಚಾಗಿರುವುದರಿಂದ ರಸ್ತೆ ಬಳಕೆದಾರರಿಗೆ ಹೆಚ್ಚಿನ ಆಯ್ಕೆಗಳನ್ನು ಒದಗಿಸುವ ಸಲುವಾಗಿ 8 ಪಥದ (100 ಮೀಟರ್ ಅಗಲದ) ಪೆರಿಫರಲ್ ರಿಂಗ್ ರಸ್ತೆಯನ್ನು (ಉತ್ತರ ಭಾಗದಲ್ಲಿ 65 ಕಿ.ಮೀ ಉದ್ದದ ಭಾಗ-1 ರಸ್ತೆಯನ್ನು ನಿರ್ಮಾಣ ಮಾಡಲು) ಹೊಸದಾಗಿ ನಿರ್ಮಿಸಲು ದಿನಾಂಕ: 26.06.2005 ರಂದು ನಿರ್ಧರಿಸಿ 67 ಗ್ರಾಮಗಳ 1962ಎಕರೆ 26ಗುಂಟೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ದಿನಾಂಕ: 23.09.20005 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ 399 ಎಂ.ಎನ್.ಎಕ್ಸ್ 2006, ದಿನಾಂಕ:29.6.2007ರಲ್ಲಿ ಈ ಯೋಜನೆಗೆ ಅವಶ್ಯಕವಾದ 1810ಎಕರೆ 18.5ಗುಂಟೆ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 345 ಬೆಂಅಸೇ 2013, ದಿನಾಂಕ:11.07.2016ರಲ್ಲಿ ಪೆರಿಫೆರಲ್ ರಿಂಗ್ ರಸ್ತೆಯನ್ನು ಅಂದಾಜು ವೆಚ್ಚ ರೂ.11950 ಕೋಟಿ (ರೂ.8100 ಕೋಟಿ ಭೂಸ್ವಾಧೀನಕ್ಕಾಗಿ ಮತ್ತು ರೂ.3850 ಕೋಟಿ ರಸ್ತೆ ನಿರ್ಮಾಣಕ್ಕಾಗಿ Intelligent Transport System ಒಳಗೊಂಡಂತೆ) ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿದ್ದು, ದಿನಾಂಕ:14.07.2016 ರಂದು ಸದರಿ ಯೋಜನೆಗೆ ಆರ್ಥಿಕ ಸಂಪನ್ಮೂಲಗಳ ಕ್ರೋಢೀಕರಣ ಹಾಗೂ ಯೋಜನೆಯಾಗಿ ಅನುಷ್ಠಾನಗೊಳಿಸಲು ಇರುವ ಅವಕಾಶಗಳ ಅಡಿಯಲ್ಲಿ ಈ ಯೋಜನೆಯನ್ನು "Special Purpose Vehicle" (SPV) ಮೂಲಕ ಕಾರ್ಯಗತಗೊಳಿಸಲು ಹಾಗೂ ದಿನಾಂಕ 11.07.2016 ರ ಸರ್ಕಾರದ ಆದೇಶದಲ್ಲಿ ನೀಡಿರುವ ತಾತ್ವಿಕ ಅನುಮೋದನೆಗಳನ್ನು ತುರ್ತಾಗಿ ಜಾರಿಗೊಳಿಸುವಂತೆ ಸರ್ಕಾರದಿಂದ ನಿರ್ದೇಶಿಸಲಾಗಿದ್ದು, ದಿನಾಂಕ:09.10.2017 ರಂದು "Special Purpose Vehicle" (SPV) ಯನ್ನು ಕಂಪನೀಸ್ ಆಕ್ಟ್ 2013 ರಡಿ ಸ್ಥಾಪಿಸಲಾಗಿರುತ್ತದೆ.

ಪಿ.ಆರ್.ಆರ್-1 ರ ಯೋಜನೆಯನ್ನು National Highway Authority of India ಮುಖಾಂತರ ಶೀಘ್ರವಾಗಿ ಅನುಷ್ಠಾನಗೊಳಿಸಲು 2016ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರದ ಭೂ ಸಾರಿಗೆ ಸಚಿವರೊಂದಿಗೆ ಚರ್ಚಿಸಿ ಪತ್ರ ಬರೆದಿರುತ್ತಾರೆ. ಅದರಂತೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ರವರು ಪಿ.ಆರ್.ಆರ್.ಗೆ ಸಂಬಂಧಿಸಿದ ಡಿ.ಪಿ.ಆರ್ ತಯಾರಿಸಲು National Highway Authority of India ರವರಿಗೆ ಸೂಚಿಸಿ, ದಿನಾಂಕ:07.10.2016 ರಂದು ಪತ್ರ ಬರೆದಿದ್ದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದಿಂದ NITI Aayoga ಕ್ಕೆ ಯೋಜನೆಯನ್ನು ಅನುಷ್ಠಾನಗೊಳಿಸಲು ಪತ್ರ ಬರೆದಿರುತ್ತಾರೆ. ತದನಂತರ ಪಿ.ಆರ್.ಆರ್ ಯೋಜನೆಯನ್ನು ಅನುಷ್ಠಾನಗೊಳಿಸಲು ಆರ್ಥಿಕ ಹಾಗೂ ತಾಂತ್ರಿಕ ಸಲಹೆಗಾರರನ್ನು ನೇಮಕ ಮಾಡಲು ಹಾಗೂ ಯೋಜನೆ ಅನುಷ್ಠಾನಕ್ಕೆ ಅಂತರಾಷ್ಟ್ರೀಯ ಸಂಸ್ಥೆಗಳಾದ JICA / World Bank / Asian development bank ಗಳಿಂದ ಹಣಕಾಸು ನೆರವು ಪಡೆಯಲು ರಾಜ್ಯ ಸರ್ಕಾರದಿಂದ ಪತ್ರ ಬರೆಯಲಾಗಿರುತ್ತದೆ.

ಪಿ.ಆರ್.ಆರ್. ಯೋಜನೆಗೆ 1810ಎಕರೆ 18.5ಗುಂಟೆ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಧಿಕವಾದ ವಾಹನ ದಟ್ಟಣೆಯಿರುವುದರಿಂದ ಸುಗಮ ಸಂಚಾರಕ್ಕಾಗಿ ನೈಸ್ ರಸ್ತೆಗೆ ಜೋಡಿಸುವುದು, ಪ್ರಮುಖ ಜಂಕ್ಷನ್‌ಗಳಲ್ಲಿ ಕ್ಲೋವರ್ ಲೀಫ್‌ಗಳ ನಿರ್ಮಾಣ ಮಾಡುವುದು ಹಾಗೂ ಟೋಲ್ ಪ್ಲಾಜಾಗಳನ್ನು ನಿರ್ಮಾಣ ಮಾಡುವುದು, ಪೆಟ್ರೋಲಿಯಂ ಸರಬರಾಜು ಕೊಳವೆ ಮಾರ್ಗದ ಸುರಕ್ಷತೆಗಾಗಿ ಪಥ ಬದಲಾವಣೆ ಕಾರಣಗಳಿಂದಾಗಿ ಪಿ.ಆರ್.ಆರ್. ರಸ್ತೆಯ ಉದ್ದವು 74 ಕಿ.ಮೀ ಆಗುವುದರಿಂದ ಭೂಸ್ವಾಧೀನದ ಒಟ್ಟು ವಿಸ್ತೀರ್ಣವು 1810ಎಕರೆ 18.5ಗುಂಟೆಗೆ ಬದಲಾಗಿ 2567 ಎಕರೆ 22¼ ಗುಂಟೆ ಆಗುತ್ತದೆ.

ಮುಂದುವರೆದು, ಜೈಕಾ ಸಂಸ್ಥೆಯು ಪೆರಿಫೆರಲ್ ರಿಂಗ್ ರಸ್ತೆಯ ಅಭಿವೃದ್ಧಿಗಾಗಿ ನಿರ್ಮಾಣ ವೆಚ್ಚವನ್ನು ಮಾತ್ರ ಭರಿಸಲು ಒಪ್ಪಿಗೆ ನೀಡಿದ್ದ ಹಿನ್ನೆಲೆಯಲ್ಲಿ, ಭೂಸ್ವಾಧೀನ ವೆಚ್ಚವನ್ನು ರಾಜ್ಯ ಸರ್ಕಾರದಿಂದ ಭರಿಸಬೇಕಾಗಿತ್ತು.

ಈ ಮಧ್ಯೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಡಾ. ಕೆ ಶಿವರಾಮಕಾರಂತ ಬಡಾವಣೆಗೆ ಸಂಬಂಧಿಸಿದ ಸಿ.ಎ ಸಂಖ್ಯೆ 7661-7663/2018 ರಲ್ಲಿ ದಿನಾಂಕ 03.12.2020 ರಂದು **Right to Fair Compensation and Transparency in Land Acquisition, Rehabilitation & Resettlement Act, 2013** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆಯಡಿ ಭೂಸ್ವಾಧೀನಪಡಿಸಿಕೊಳ್ಳುವ ಜಮೀನುಗಳಿಗೆ ಅನ್ವಯಿಸುವುದಿಲ್ಲವೆಂದು ತಿಳಿಸಿರುತ್ತದೆ. ಸದರಿ ನಿರ್ದೇಶನವು ಪಿ.ಆರ್.ಆರ್. ಯೋಜನೆಗೂ ಸಹ ಅನ್ವಯಿಸುತ್ತದೆಯೇ ಎಂಬ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ **IA** ದಾಖಲಿಸಲಾಗಿತ್ತು. ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 20.01.2022 ರ ಆದೇಶದಲ್ಲಿ ಬಿಡಿಎ ವತಿಯಿಂದ ಭೂಸ್ವಾಧೀನ ಪಡೆಯುವ ಪ್ರಕರಣಗಳಿಗೆ 2013ರ ಕಾಯ್ದೆ ಅನ್ವಯವಾಗುವುದಿಲ್ಲವೆಂದು ತಿಳಿಸಿರುತ್ತದೆ.

ಆದ್ದರಿಂದ, ಸಚಿವ ಸಂಪುಟದ ತೀರ್ಮಾನದಂತೆ ಪಿ.ಆರ್.ಆರ್ ಯೋಜನೆಯನ್ನು ಪಿಪಿಪಿ ಡಿಬಿಎಫ್‌ಒಟಿ (ಸಾರ್ವಜನಿಕ ಖಾಸಗಿ ಸಹಭಾಗಿತ್ವ-ವಿನ್ಯಾಸ, ನಿರ್ಮಾಣ, ಆರ್ಥಿಕ, ನಿರ್ವಹಣೆ ಹಾಗೂ ವರ್ಗಾವಣೆ) ಮಾದರಿಯಲ್ಲಿ ರಿಯಾಯಿತಿದಾರರಿಂದ ಸಂಪೂರ್ಣ ಧನ ಸಹಾಯದ ಯೋಜನೆಯಾಗಿ (ಭೂಸ್ವಾಧೀನ, ನಿರ್ಮಾಣ, ನಿರ್ವಹಣೆ ಮತ್ತು ಕಾರ್ಯಾಚರಣೆಯ ವೆಚ್ಚ) ಕಾರ್ಯಗತಗೊಳಿಸಲು, ನಿಯಮಾನುಸಾರ ಭೂಸ್ವಾಧೀನ ಪ್ರಕ್ರಿಯೆಯನ್ನು ಪಾಲಿಸಿದ ನಂತರ ಐ-ತೀರ್ಪು ಒಪ್ಪಂದದ ಮುಖಾಂತರ ಅಥವಾ ಭೂಸ್ವಾಧೀನ ಪ್ರಕ್ರಿಯೆ ಮೂಲಕ ಸಚಿವ ಸಂಪುಟವು ನಿರ್ಧರಿಸುವ ದರದಲ್ಲಿ ಪರಿಹಾರ ನೀಡಲು, ಅವಾರ್ಡ್ ಮಾಡಲು ಹಾಗೂ ಸದರಿ ಮೊತ್ತವನ್ನು ರಿಯಾಯಿತಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಸ್ಕ್ರೋ ಖಾತೆಗೆ ಜಮಾ ಮಾಡುವ ಮೊತ್ತದಿಂದ ಭೂ ಮಾಲೀಕರಿಗೆ ಪರಿಹಾರ ನೀಡಿ, ಪಿ.ಆರ್.ಆರ್ ಯೋಜನೆಗೆ ಅಧಿಸೂಚಿಸಿರುವ ಜಮೀನನ್ನು ಸ್ವಾಧೀನಕ್ಕೆ ಪಡೆಯಲು ಸರ್ಕಾರದ ಆದೇಶ ಸಂಖ್ಯೆ: ನಅಇ 214 ಎಂಎನ್‌ಜೆ 2018, ದಿನಾಂಕ: 21.02.2022ರಲ್ಲಿ ಅನುಮೋದನೆ ನೀಡಲಾಗಿತ್ತು.

ಅದರನ್ವಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಜಾಗತಿಕ ಟೆಂಡರ್‌ನ್ನು ಎರಡು ಬಾರಿ ಆಹ್ವಾನಿಸಲಾಗಿತ್ತು. ಆದರೆ ಯಾವುದೇ ಬಿಡ್ಡುದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವುದಿಲ್ಲ.

ಸಚಿವ ಸಂಪುಟವು ಯಾವ ದರದಲ್ಲಿ ಭೂಪರಿಹಾರ ನೀಡಬೇಕೆಂದು ತೀರ್ಮಾನಿಸಿರುವುದಿಲ್ಲ. ಬಿಡಿಎ ಕಾಯ್ದೆ 1976ರಡಿ ಭೂಪರಿಹಾರ ಪಡೆಯಲು ರೈತರು ಪ್ರತಿರೋಧ ವ್ಯಕ್ತಪಡಿಸಿದ್ದರಿಂದ, ಯಾವ ರೀತಿ ಭೂ ಪರಿಹಾರ ನೀಡಬೇಕೆಂದು ತೀರ್ಮಾನ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಭೂ ಪರಿಹಾರವನ್ನು ನಿರ್ಧರಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದ್ದು, ಭೂ ಪರಿಹಾರ ದರವನ್ನು ನಿರ್ಧರಿಸಿದ ನಂತರ ಪುನ: ಟೆಂಡರ್ ಆಹ್ವಾನಿಸಲಾಗುವುದು.

**ಸಂಖ್ಯೆ: ನಅಇ 151 ಬೆಂಭೂಸ್ವಾ 2023**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ